KARNATAKA LEGISLATIVE ASSEMBLY RESEARCH AND REFERENCE BRANCH
PAPER CLIPPINGS
DEPARTMENT / SUBJECT:
NAME OF THE NEWS PAPER:
DATE : 12/6/2020

## ಸಂಪುಟ ಸಭೆಯಲ್ಲಿ ತೀರ್ಮಾನ | ಆರು ತಿಂಗಳ ಒಳಗೆ ಚುನಾವಣೆ

# ಗ್ರಾಪಂಗಳಿಗೆ ಆಡಳಿತಾಧಿಕಾರಿಗಳ ನೇಮಕ

■ **ವಿಕ ಸುದ್ದಿಲೋಕ** ಬೆಂಗಳೂರು 11/6/2020

ಕೋವಿಡ್‌ನಿಂದಾಗಿ ಚುನಾವಣೆ ನಡೆಸುವುದು ಕಷ್ಟವಾಗಿರುವುದರಿಂದ ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ.



ತೀರ್ಮಾನ

ಕೊರೊನಾ ಇರುವುದರಿಂದ ಸಕಾಲದಲ್ಲಿ ಚುನಾವಣೆ ನಡೆಸಲು ಸಾಧ್ಯವಾಗುತ್ತಿಲ್ಲ, ಪಂಚಾಯಿತಿಗಳ ಅವಧಿ ಪೂರ್ಣಗೊಂಡಿರುವುದರಿಂದ ಆಡಳಿತಾಧಿಕಾರಿ ನೇಮಿಸಲು ಸರಕಾರ ನಿರ್ಧರಿಸಿದೆ. ಜತೆಗೆ ಮುಂದಿನ 2ರಿಂದ 3 ತಿಂಗಳಲ್ಲಿ ಚುನಾವಣೆ ಪ್ರಕ್ರಿಯೆಗೆ ಸಿದ್ಧತೆ ಮಾಡಿಕೊಳ್ಳುವಂತೆಯೂ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. 6 ತಿಂಗಳ ಒಳಗೆ ಚುನಾವಣೆ ನಡೆಸಲಾಗುತ್ತದೆ ಎಂದು ಸಂಪುಟ ಸಭೆಯ ವಿವರ ನೀಡಿದ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ತಿಳಿಸಿದರು.

**ಸಹಕಾರ ಸಂಘ ಸಂಸ್ಥೆಗಳಿಗೆ ಚುನಾವಣೆ:** ಸಕ್ಕರೆ ಕಾರ್ಖಾನೆ ಹೊರತು ಪಡಿಸಿ ರಾಜ್ಯದ ಸಹಕಾರ ಸಂಘ ಸಂಸ್ಥೆಗಳ ಚುನಾವಣೆ ನಡೆಸಲು ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ.

ಹೆಚ್ಚು ಸದಸ್ಯರು ಇರುವ ಕಾರಣ ಸಕ್ಕರೆ ಕಾರ್ಖಾನೆಗಳ ಚುನಾವಣೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಗುತ್ತಿದೆ. ಉಳಿದಂತೆ ಇತರ ಸಹಕಾರ ಸಂಘಗಳ ಚುನಾವಣೆ ನಡೆಯಲಿದೆ ಎಂದು ಕಾನೂನು ಸಚಿವ ಮಾಧುಸ್ವಾಮಿ ಹೇಳಿದರು.

ಇದೇ ವೇಳೆ, ರಾಜ್ಯದಲ್ಲಿನ 1,307 ಆರೋಗ್ಯ ಉಪ ಕೇಂದ್ರ ಹಾಗೂ 1,694 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು 'ಆರೋಗ್ಯ ಮತ್ತು ಕ್ಷೇಮ ಕೇಂದ್ರ' (ಎಚ್‌ಡಬ್ಲ್ಯುಎಫ್) ಮೇಲ್ದರ್ಜೆಗೆ ಏರಿಸಲು ಸಂಪುಟ ಸಭೆ ತೀರ್ಮಾನಿಸಿದೆ.

ರಾಜ್ಯದ 8 ಜಿಲ್ಲೆಗಳ 47 ತಾಲೂಕುಗಳಲ್ಲಿ ಈ ಯೋಜನೆ ಜಾರಿಯಾಗಲಿದೆ. ಬ್ಯಾಡಗಿ, ಹಾನಗಲ್, ಹಾವೇರಿ, ಹಿರೇಕೆರೂರು, ರಾಣೆಬೆನ್ನೂರು, ಸವಣೂರು, ಶಿಗ್ಗಾಂವ್, ಭಟ್ಕಳ, ಹಳಿಯಾಳ, ಹೊನ್ನಾವರ, ಕಾರವಾರ, ಕುಮಟ, ಮುಂಡಗೋಡ್, ಶಿರಸಿ, ಸಿದ್ದಾಪುರ, ಜೋಯಿಡಾ, ಶಿವಮೊಗ್ಗ, ಸಾಗರ, ಶಿಕಾರಿಪುರ, ಸೊರಬ, ಹೊಸನಗರ, ರೋಣ, ಶಿರಹಟ್ಟಿ ಮುಂಡರಗಿ, ನರಗುಂದ, ಮಾಲೂರು, ಕೋಲಾರ, ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೆಗಾಲ, ಯಳಂದೂರು, ಚಳ್ಳಕೆರೆ, ಹಿರಿಯೂರು, ಹೊಸದುರ್ಗ, ಮೊಳಕಾಲ್ಮೂರು ತಾಲೂಕುಗಳು ಇದರಲ್ಲಿ ಸೇರಿವೆ. ಕೇಂದ್ರ ಸರಕಾರ ಈ ಕೇಂದ್ರಗಳಿಗೆ 12.62 ಕೋಟಿ ರೂ. ನೀಡಲಿದೆ. 3 ವರ್ಷದಲ್ಲಿ ಯೋಜನೆ ಜಾರಿಯಾಗಲಿದೆ ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ತಿಳಿಸಿದರು.

## ಸೇಲ್ ಅಗ್ರಿಮೆಂಟ್ ಅಧಿಕೃತ

ರಿಯಲ್ ಎಸ್ಟೇಟ್ ಮತ್ತು ನಿಯಂತ್ರಣ ಕಾಯಿದೆಗೆ ತಿದ್ದುಪಡಿ ತರಲಾಗುತ್ತಿದೆ. ಅದರಂತೆ ಇನ್ನು ಮುಂದೆ ಸೇಲ್ ಅಗ್ರಿಮೆಂಟ್ ಅಧಿಕೃತ ದಾಖಲೆಯಾಗಲಿದೆ. ಸದ್ಯಕ್ಕೆ ಸೇಲ್ ಅಗ್ರಿಮೆಂಟ್‌ಗೆ ಅವಕಾಶವಿಲ್ಲ. ಕಾಯಿದೆ ತಿದ್ದುಪಡಿ ಬಳಿಕ ಸೇಲ್ ಅಗ್ರಿಮೆಂಟ್ ಮಾಡಿಕೊಳ್ಳಬಹುದು. ಫ್ಲ್ಯಾಟ್ ಕೊಳ್ಳುವವರಿಗೆ ಅನುಕೂಲವಾಗಲಿದೆ. ಸರಕಾರದ ಈ ತೀರ್ಮಾನದಿಂದ ಫ್ಲ್ಯಾಟ್ ಕೊಂಡಿರುವ ಲಕ್ಷಾಂತರ ಮಂದಿಗೆ ದಾಖಲೆ ಪತ್ರದ ಭದ್ರತೆ ಸಿಗಲಿದೆ. ರೇರಾ ಕಾಯಿದೆಯಲ್ಲಿನ ಸೂಚನೆ ಅನುಸಾರ ಸರಕಾರ ಈ ತೀರ್ಮಾನ ತೆಗೆದುಕೊಂಡಿದೆ.

## ಮುಕ್ತ ವಿವಿಗೆ ಮಾತ್ರ ದೂರಶಿಕ್ಷಣ

ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮಾತ್ರ ದೂರಶಿಕ್ಷಣ ನೀಡಬೇಕೆಂಬ ತೀರ್ಮಾನವನ್ನು ಸಂಪುಟ ಸಭೆ ಕೈಗೊಂಡಿದೆ. ಹಾಗಾಗಿ ರಾಜ್ಯದ ಇತರ ವಿವಿಗಳಲ್ಲಿನ ದೂರಶಿಕ್ಷಣ ಕೇಂದ್ರವನ್ನು ಬಂದ್ ಮಾಡಬೇಕಾಗುತ್ತದೆ. ಮುಕ್ತ ವಿಶ್ವವಿದ್ಯಾಲಯ ಪಾವತಿಸಬೇಕಿದ್ದ ಆದಾಯ ತೆರಿಗೆಯಿಂದ ವಿನಾಯಿತಿ ನೀಡಲು ನಿರ್ಧರಿಸಲಾಗಿದೆ.



ಮಂಡ್ಯ ಕ್ಲಸ್ಟರ್ ವಿವಿ ಹಾಗೂ ಬೆಂಗಳೂರಿನ ಮಹಾರಾಣಿ ಕ್ಲಸ್ಟರ್ ವಿವಿಗಳಿಗೆ ವಿಶೇಷಾಧಿಕಾರಿ ನೇಮಿಸುವುದು, ಬೆಂಗಳೂರಿನ ಸರಕಾರಿ ವಿಜ್ಞಾನ ಕಾಲೇಜಿಗೆ ನೃಪತುಂಗ ವಿಶ್ವವಿದ್ಯಾಲಯವೆಂದು ನಾಮಕರಣ ಮಾಡಿ ಮೇಲ್ದರ್ಜೆಗೇರಿಸುವುದು, ಬೆಂಗಳೂರು ಕೇಂದ್ರ ವಿವಿಯನ್ನು (ಬೆಂಗಳೂರು ಸೆಂಟ್ರಲ್ ವಿವಿ) ಬೆಂಗಳೂರು ನಗರ ವಿವಿಯೆಂದು ಮರು ನಾಮಕರಣ ಮಾಡಲು ತೀರ್ಮಾನಿಸಲಾಗಿದೆ.

## ಪೊಲೀಸ್ ಬಡ್ತಿಗೆ ಸೇವಾವಧಿ ಕಡಿತ

ಡಿವೈಎಸ್‌ಪಿ ಹುದ್ದೆಯಿಂದ ಎಎಸ್‌ಪಿ ಹುದ್ದೆಗೆ ಬಡ್ತಿ ಹೊಂದಲು ಈ ಮೊದಲು 5 ವರ್ಷದ ಸೇವೆ ಪರಿಗಣಿಸಲಾಗುತ್ತಿತ್ತು. ಅದನ್ನು 4 ವರ್ಷಕ್ಕೆ ನಿಗದಿಗೊಳಿಸುವ ಪ್ರಸ್ತಾವಕ್ಕೆ ಒಪ್ಪಿಗೆ ನೀಡಲಾಗಿದೆ. ಹಾಗೆಯೇ ಸಿಪಿಸಿ ಹುದ್ದೆಯಲ್ಲಿ ಸಿಎಆರ್, ಡಿಎಆರ್, ಕೆಎಸ್‌ಆರ್‌ಪಿಯ ಪಿಸಿಗಳು ಸಿಪಿಸಿ ಹುದ್ದೆಗೆ ಅರ್ಜಿ ಸಲ್ಲಿಸಿದರೆ ಅಂಥವರಿಗೆ ಶೇ.10ರಷ್ಟು ಸೀಟು ಮೀಸಲಿಡುವ ಪ್ರಸ್ತಾಪಕ್ಕೂ ಸಮ್ಮತಿಸಲಾಗಿದೆ.

## 53 ಕೇಸ್ ವಾಪಸ್

ಗಣೇಶೋತ್ಸವ ಸಂದರ್ಭದ ಗಲಾಟೆ, ರೈತರ ಹೋರಾಟ, ಟಿಪ್ಪು ಜಯಂತಿ ಪರ, ವಿರೋಧ ಹೋರಾಟ ಸಂಬಂಧದ 53 ಮೊಕದ್ದಮೆಗಳನ್ನು ವಾಪಸ್ ಪಡೆಯಲು ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ. ಇದರಲ್ಲಿ ಹಿಂದುಗಳು, ಮುಸ್ಲಿಮರು ಹಾಗೂ ಇತರರ ಮೇಲೆ ಹೂಡಲಾಗಿದ್ದ ಪ್ರಕರಣಗಳೂ ಇವೆ. ಹಾಸನ ಜಿಲ್ಲೆಯಲ್ಲಿ ರೈತರ ಮೇಲೆ ಹೂಡಿದ್ದ ಹಾಗೂ ಬಾಗಲಕೋಟ ಜಿಲ್ಲೆಯಲ್ಲಿ ಗಣೇಶ ಹಬ್ಬದ ಸಂದರ್ಭದಲ್ಲಿ ಹಿಂದೂ, ಮುಸ್ಲಿಂ ಗಲಾಟೆಗೆ ಸಂಬಂಧಿಸಿದ ಪ್ರಕರಣಗಳೂ ಇದರಲ್ಲಿ ಸೇರಿವೆ.

## ಪ್ರೊಬೇಷನರ್ಸ್ ಸಂಬಳ ಹೆಚ್ಚಳ

ಕೆಪಿಎಸ್‌ಸಿ ಮೂಲಕ 1998ರಲ್ಲಿ ನೇಮಕಗೊಂಡ ಗೆಜೆಟೆಡ್ ಪ್ರೊಬೇಷನರ್ಸ್ ವಿಚಾರದಲ್ಲಿ ಗೊಂದಲವಾಗಿತ್ತು. ನಂತರ ಕೆಲವರು ನೇಮಕಗೊಂಡಿದ್ದಾರೆ. ಈ ಪೈಕಿ 70 ಮಂದಿ ಕರ್ತವ್ಯಕ್ಕೆ ಹಾಜರಾಗಿದ್ದಾರೆ. ಅವರು ನೇಮಕಗೊಂಡಾಗ ಇದ್ದ ಹುದ್ದೆಯ ಬದಲು ಈಗ ಮುಂಬಡ್ತಿ ಹೊಂದಿದ್ದಾರೆ. ಅಂಥವರಿಗೆ ಹಾಲಿ ನಿರ್ವಹಿಸುವ ಹುದ್ದೆಯ ಸಂಬಳ ನೀಡಲಾಗುವುದು. ಆದರೆ, ಹಳೆಯ ಬಾಕಿ ನೀಡಲಾಗುವುದಿಲ್ಲ ಎಂಬ ತೀರ್ಮಾನವನ್ನು ಸಂಪುಟದಲ್ಲಿ ತೆಗೆದುಕೊಳ್ಳಲಾಗಿದೆ.

## ಕೆಪಿಎಸ್‌ಸಿ ಅಧಿಕಾರ ಮೊಟಕು

ಕೆಪಿಎಸ್‌ಸಿಯಿಂದ ಆಯ್ಕೆಯಾಗಿ ನಾನಾ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ / ನೌಕರರಿಗೆ ಮುಂಬಡ್ತಿ ಹಾಗೂ ಶಿಕ್ಷೆ ವಿಧಿಸುವಾಗ ಸರಕಾರ ಸ್ವಯಂ ನಿರ್ಧಾರ ಕೈಗೊಳ್ಳಲು ಸಂಪುಟ ಸಭೆ ಒಪ್ಪಿಗೆ ನೀಡಿದೆ. ಈ ಮೊದಲು ಕೆಪಿಎಸ್‌ಸಿಯೊಂದಿಗೆ ಸಮಾಲೋಚಿಸಿ ಸಂಸ್ಥೆಯ ಸಲಹೆ ಆಧರಿಸಿ ಮುಂದಿನ ಕ್ರಮ ಕೈಗೊಳ್ಳಬೇಕಾಗಿತ್ತು.

## ನಗರ ಮತ್ತು ಗ್ರಾಮಾಂತರ ಯೋಜನೆ ತಿದ್ದುಪಡಿ

ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಭೂ ಉಪಯೋಗ ನಕ್ಷೆ ಸಿದ್ಧಪಡಿಸಿದಾಗ ಅದನ್ನು ಸ್ಥಳೀಯ ಯೋಜನಾ ಪ್ರಾಧಿಕಾರದ ನೋಟಿಸ್ ಬೋರ್ಡ್‌ನಲ್ಲಿ ಪ್ರಕಟಿಸಬೇಕು. ಆಕ್ಷೇಪಣೆಯಿದ್ದರೆ 1 ತಿಂಗಳ ಒಳಗೆ ಭೂಮಾಲೀಕರು ಅದನ್ನು ಸಲ್ಲಿಸಬೇಕು. ಆಕ್ಷೇಪಣೆ ಬಂದರೆ ಅದರಂತೆ ತಿದ್ದುಪಡಿ ಮಾಡಿಕೊಡಬೇಕು ಎಂಬ ಷರತ್ತು ವಿಧಿಸಲು ಕಾಯಿದೆಗೆ ತಿದ್ದುಪಡಿ ತರಲಾಗುತ್ತದೆ.

## ಸಂಪುಟದ ಇತರೆ ತೀರ್ಮಾನಗಳು

- ಎ ಮತ್ತು ಬಿ ವೃಂದದ ನೌಕರರಂತೆ ಸಿ ಮತ್ತು ಡಿ ವೃಂದದವರೂ ವಾರ್ಷಿಕ ಮೌಲ್ಯಮಾಪನ ವರದಿಯನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ನಿಯಮ ತಿದ್ದುಪಡಿ.
- ಹಾಸನ, ಸಿಂಧಗಿಯಲ್ಲಿ ಹೊಸ ತೋಟಗಾರಿಕಾ ಕಾಲೇಜು ಸ್ಥಾಪಿಸುವ ಹಿಂದಿನ ಸರಕಾರದ ತೀರ್ಮಾನ ವಾಪಸ್.
- ಬೆಂಗಳೂರು ದಕ್ಷಿಣ ತಾಲೂಕಿನ ಭೀಮನಕುಂಪೆ ಗ್ರಾಮದಲ್ಲಿ ಲೋಕಶಿಕ್ಷಣ ಟ್ರಸ್ಟ್‌ಗೆ ನೀಡಿದ್ದ 4 ಎಕರೆಯನ್ನು ಕನ್ನಡ ಪ್ರಸಾರದ ಉದ್ದೇಶಕ್ಕೆ ಬಳಸಲು ಸಮ್ಮತಿ.
- ಬೆಂಗಳೂರಿನ ಚಿಕ್ಕಬೇಗೂರಿನಿಂದ 15 ಎಂಎಲ್‌ಡಿ (20.5 ಕೋಟಿ ರೂ.), ಹುಳಿಮಾವಿನಿಂದ 10 ಎಂಎಲ್‌ಡಿ (19.5 ಕೋಟಿ ರೂ.) ಸಂಸ್ಕರಿತ ನೀರನ್ನು ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗೆ ನೀಡಲು ಆಡಳಿತಾತ್ಮಕ ಅನುಮೋದನೆ.
- ಉಡುಪಿ ಜಿಲ್ಲೆಯ ಬೈಂದೂರು, ಉಡುತೊರೆ, ಪಡುವರಿ ಗ್ರಾಪಂಗಳನ್ನು ಸೇರಿಸಿ ಪಟ್ಟಣ ಪಂಚಾಯಿತಿ ರಚಿಸಲು ಸಮ್ಮತಿ.
- ಚಿಕ್ಕಮಗಳೂರು ವೈದ್ಯಕೀಯ ಕಾಲೇಜಿನ ಕಟ್ಟಡವನ್ನು ಕಸಬಾ ಹೋಬಳಿಯ ತೇಗೂರು ಗ್ರಾಮದಲ್ಲಿ ನಿರ್ಮಿಸಲು ತೀರ್ಮಾನ.

## ಉಪಖನಿಜ ನಿಯಮಕ್ಕೆ ತಿದ್ದುಪಡಿ

ಸಂಪನ್ಮೂಲ ಹೆಚ್ಚಿಸಲು ಉಪಖನಿಜ ನಿಯಮಾವಳಿಗೆ ತಿದ್ದುಪಡಿ ತಂದು ಗ್ರಾನೈಟ್ ಇನ್ನಿತರ ವಸ್ತುಗಳಿಗೆ ತೂಕದ ಆಧಾರದಲ್ಲಿ ರಾಜಧನ ನಿಗದಿ ಮಾಡಲಾಗುವುದು. ಗ್ರಾನೈಟ್ ರಫ್ತಿಗೆ ಹೆಚ್ಚಿನ ಉತ್ತೇಜನ ನೀಡಲಾಗುವುದು. ಈ ಸಂಬಂಧ ಗ್ರಾನೈಟ್ ಮೇಲಿನ ನಿರ್ಬಂಧ ತೆರವು ಮಾಡಲು ಸಂಪುಟ ನಿರ್ಧರಿಸಿದೆ.